ಶ್ರೀ ಜಿ. ಮಾದೇಗೌಡ.— ೧೧ ಲಕ್ಷ ಬಾವಿಗಳನ್ನು ತೋಡುವುದಕ್ಕೆ ಸಾಧ್ಯವಿದೆ ಮತ್ತು ಅದರಿಂದ ೩೩ ಲಕ್ಷ ಎಕರೆ ಜಮೀನಿಗೆ ನೀರಾವರಿ ಸೌಲಭ್ಯವನ್ನು ಒದಗಿಸಬಹುದೆಂದು ಅಂದಾಜು ಮಾಡಲಾಗಿದೆ.

ಶ್ರೀ ಹೆಚ್. ಕೆ. ಶಿವರುದ್ರಪ್ಪ .— ಅಂತರ್ಜಲ ಶೋಧನೆಗಾಗಿ ಮಾಸ್ಟರ್ ಪ್ಲಾನ್ ಮಾಡಿದ್ದೇವೆಂದು ಹೇಳಿದ್ದಾರೆ. ನಮ್ಮ ಗುಂಡಲಪೇಟೆ ತಾಲ್ಲೂಕಿಗೆ ಏನು ಒಂದು ಮಾಸ್ಟರ್ ಪ್ಲಾನನ್ನು ಮಾಡಿದ್ದಾರೆ ಅದು ಸರಿಯಾದ ಪ್ಲಾನ್ ಅಲ್ಲವೆಂದು ಹೇಳುತ್ತೇನೆ. ಏಕೆಂದರೆ ಅಲ್ಲಿ ಬೇಕಾದಷ್ಟು ನೀರು ಸಿಗತಕ್ಕ ಅವಕಾಶ ಇದೆ. ಆದ್ದರಿಂದ ಆದನ್ನು ಪುನರ್ ಪರಿಶೀಲನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಜಿ. ಮಾದೇಗೌಡ .— ಇಡೀ ರಾಜ್ಯದಲ್ಲಿ ಈ ಒಂದು ಸರ್ವೆ ಮಾಡಿದ್ದೇವೆ. ಆ ಸರ್ವೆ ಪ್ರಕಾರ ಎಲ್ಲ ತಾಲ್ಲೂಕುಗಳ ಮತ್ತು ಜಿಲ್ಲೆಗಳ ಪಟ್ಟಿ ಇದೆ. ಅದನ್ನು ಬೇಕಾದರೆ ನಾನು ಓದುತ್ತೇನೆ.

ಅಧ್ಯಕ್ಷರು .— ಮಾನ್ಯ ಸದಸ್ಯರು ತಮ್ಮ ತಾಲ್ಲೂಕಿಗೆ ಸಂಬಂಧಪಟ್ಟ ಹಾಗೆ ಮಾಡಿರುವ ಪ್ಲಾನ್ ಸರಿಯಿಲ್ಲದಿದ್ದರೆ ಮಾನ್ಯ ಮಂತ್ರಿಗಳಿಗೆ ಪ್ರತ್ಯೇಕವಾಗಿ ಒಂದು ಪತ್ರ ಬರೆಯಿರಿ.

ಶ್ರೀ ಹೆಚ್.ಕೆ. ಶಿವರುದ್ರಪ್ಪ.— ನಮ್ಮಲ್ಲಿ ನೀರು ದೊರೆಯತಕ್ಕ ಜಾಗ ಬೇಕಾದಷ್ಟು ಇದೆ, ಆದರೆ ಕೆಲವು ಹಳ್ಳಿಗಳನ್ನು ಮಾತ್ರ ಸರ್ವೆ ಮಾಡಿದ್ದಾರೆ. ಅದು ಸರಿಯಲ್ಲ. ಆದ್ದರಿಂದ ಅದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಅಧ್ಯಕ್ಷರು .— ಮಾನ್ಯ ಮಂತ್ರಿಗಳು ಅದನ್ನು ನೋಟ್ ಮಾಡಿಕೊಳ್ಳುವುದು.

ಶ್ರೀ ಪಿ. ರಾಮದೇವ್ .— ನಾನು ೮೦ ಪ್ರಶ್ನೆಗಳನ್ನು ಕಳುಹಿಸಿದ್ದೇನೆ. ಆ ಪೈಕಿ ಇದುವರೆಗೆ ೩೦ ಪ್ರಶ್ನೆಗಳಿಗೆ ಮಾತ್ರ ಸರ್ಕಾರದಿಂದ ಉತ್ತರ ಬಂದಿದೆ. ಪ್ರಶ್ನೆ ಕಳುಹಿಸಿದ ೧೫ ದಿವಸಗಳೊಳಗೆ ಉತ್ತರಿಸ ಬೇಕೆಂದು ತಾವು ನೀತಿ ನಿಯಮಗಳನ್ನು ಮಾಡಿದ್ದರೂ ಸಹ ಉತ್ತರ ಕಾಲಕ್ಕೆ ಸರಿಯಾಗಿ ಬರುತ್ತಿಲ್ಲ. ಆದ್ದರಿಂದ, ಆದಷ್ಟು ಜಾಗ್ರತೆ ಉತ್ತರಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಒಂದು ಮಹತ್ವದ ಪ್ರಶ್ನೆಯನ್ನು ಕಳುಹಿಸಿದ್ದೆ, ಅದಕ್ಕೂ ಕೂಡ ಈ ಲಾಗಾಯ್ತು ಉತ್ತರ ಬಂದಿಲ್ಲ. ಅದರ ಕಡೆಗೆ ಸಹ ತಾವು ತೀವ್ರ ಗಮನಕೊಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು .— ಅದಕ್ಕೆಲ್ಲ ತಕ್ಕ ವ್ಯವಸ್ಥೆ ಮಾಡೋಣ. ಇಲ್ಲಿಗೆ ಪ್ರಶ್ನೋತ್ತರಗಳು ಮುಗಿದವು.

ಕಾರ್ಯದರ್ಶಿಯರ ವರದಿ

ಕಾರ್ಯದರ್ಶಿ .— ಸ್ವಾಮಿ, ಕಳೆದ ಬಾರಿ ಮಂಡಿಸಿದ ವರದಿಯ ನಂತರ ಮಾನ್ಯ ರಾಜ್ಯಪಾಲರು ಒಪ್ಪಿಗೆ ನೀಡಿರುವ ಮಸೂದೆಗಳ ಪಟ್ಟಿಯನ್ನು ಸಭೆಯ ಮುಂದೆ ಇಡುತ್ತಿದ್ದೇನೆ.

Statement showing the Bills assented to by the Governor or by the President.

Sl. No.	Name of the Bill	Date of Assent	Assented by
1	2	3	4
1	The Karnataka Appropriation Bill. 1980.	4-3-1980	Governor
2	The Karnataka Land Reforms (Amendment) Bill, 1980.	6-3-1980	do
3	The Karnataka Co-operative Societies (Amendment) Bill, 1980.	12-3-1980	do

1	2	3	4
4	The Karnataka Co-operative Societies (Second Amendment) Bill, 1980.	12-3-1980	do
5	The Motor Vehicles (Karnataka Amendment) Bill, 1980.	7-3-1980	Presiden
6	The Karnataka Command Area Development Bill- 1980.	18-3-1980	do
7	The Karnataka Appropriation (Vote-on Account) Bill, 1980	26-3-1980	Governor
8	The Mangalore Port Trust (Repeal) Bill, 1980.	27-3-1980	do
9	The Karnataka Motor Vehicles Taxation (Amendment) Bill, 1980.	8-4-1980	do
10	The Karnataka Motor Vehicles Taxation (Second Amendment) Bill, 1980.	8-4-1980	do
11	The Karnataka Village Panchayat and Local Boards (Amendment) Bill, 1980	9-4-1980	do
12	The Karnataka Silkworm Seed, Cocoon and Silk yarn (Regulation of Production, Supply. Distribution and Sale) (Amendment) Bill, 1980.	10-4-1980	do
13	The Bangalore City Civil Court Bill, 1979.	8-4-1980	President
14	The Karnataka Taxation Laws (Amendment) Bill, 1980.	15-4-1980	Governor
15	The Karnataka Stamp (Amendment) Bill, 1980.	15-4-1980	do
16	The Karnataka Public Moneys (Recovery of Dues) Bill, 1979	18-4-1980	President
17	The Karnataka Agricultural Produce Marketing (Regulation) (Amendment) Bill, 1980.	29-4-1980	Governor
18	The Karnataka Religious and Charitable Institutions (Karnataka Amendment) Bill, 1979.	18-5-1980	President
19	The Registration (Karnataka Amendment) Bill, 1980.	8-6-1980	do

1	2	3	4
20	The Karnataka Sheep and Sheep Products(Amendment) Bill, 1980.	18-6-1980	Governor
21	The Karnataka Tax on entry of goods into a local area for consumption, use or sale therein Bill, 1980.	18-7-1980	President
22	The Mysore Betting Tax (Karnataka Amendment) Bill, 1980.	19-7-1980	Governor
23	The Bangalore City Civil Court (Amendment) Bill, 1980.	23-7-1980	do
24	The Karnataka Appropriation (No. 2) Bill 1980.	31-7-1980	do
25	The Karnataka State Universities (Amendment) Bill, 1980.	6-9-1980	do
26	The Karnataka Entertainment Tax (Amendment) Bill, 1980.	6-8-1980	do
27	The Karnataka Vacant Land in Urban Areas (Prohibition of Alienation) (Amendment) Bill, 1980.	9-4-1980	do
28	The Karnataka Municipal Corporation (Amendment) Bill, 1980.	6-9-1980	do
29	The Karnataka Debt Relief Bill, 1980.	26-12-1980	President

REPRESENTATIONS BY MEMBERS

SRI D. DEVARAJ URS (Leader of the Opposition) :— We have given adjournment motion...

MR. SPEAKER.—I have received that adjournment motion.

SRI D. DEVARAJ URS.—In that connection, we will be failing in our duty if we do not raise it before any other business of the House is taken up according to rule.

ಅಧ್ಯಕ್ಷರು.—ನಾನು ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ ಸಭೆಯ ಕಾರ್ಯಕ್ರಮ ಪಟ್ಟಿಯಲ್ಲಿರುವಂತೆ ಪೇಪರ್‌ಗಳನ್ನು ಸಭೆಯ ಮುಂದಿಡುವುದು ಬಿಲ್ಸ್ ಇಂಟ್ರಡ್ಯೂಸ್‌ಮಾಡುವುದು ಇವೆಲ್ಲಾ ಮುಗಿದ ಮೇಲೆ ತದನಂತರ ತಾವು ತಮ್ಮ ವಿಷಯವನ್ನು ಪ್ರಸ್ತಾಪ ಮಾಡಬಹುದು.

ಶ್ರೀ ಡಿ. ದೇವರಾಜ ಅರಸ್.—ಎಲ್ಲಾ ಆದಮೇಲೆ ತೆಗೆದುಕೊಳ್ಳುವುದಕ್ಕೆ ನನ್ನ ಅಭ್ಯಂತರವಿಲ್ಲ. ಆದರೆ ಎಲ್ಲಾ ಆದಮೇಲೆ ಟೆಕ್ನಿಕಲ್ಲಾಗಿ ನೀವು ಮೊದಲೇ ರೈಸ್ ಮಾಡಲಿಲ್ಲ ಈಗ ಲೇಟಾಯಿತು ಎಂದೂ